**ಅಸಲು ದಾವಾ ಸಂಖ್ಯೆ ಃ- 312/2016** ಸಿ.ಡಬ್ಲ್ಯೂಃ- 1

ದಿನಾಂಕಃ 13.01.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ-

ಹನುಮಸಾಗರ ಗ್ರಾಮವು ಇನಾಂ ಗ್ರಾಮವಾಗಿದ್ದರಿಂದ ಕಂದಾಯ ದಾಖಲೆಗಳಲ್ಲಿ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ವೆ ನಂಬರ್ ಆಗಿಲ್ಲ. ದಾವಾ ಆಸ್ತಿಯು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ- ವಾದಿಯ ಪರ ಶ್ರೀ.ಹೆಚ್ ಜಿ ಬಿ ವಕೀಲರು

ಹನುಮಸಾಗರ ಗ್ರಾಮದ ಸರ್ವೆ ನಂ.91 ನ್ನು ಗ್ರಾಮ ನಕ್ಷೆಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂ.91 ಕ್ಕೆ ಸಂಬಂಧಿಸಿದಂತೆ ಪಹಣಿ ಬಂದಿದೆ ಎಂದರೆ ಸಾಕ್ಷಿಯು ಪಹಣಿಯಲ್ಲೂ ಸಹ ಪಿ.ಆರ್ ನಂಬರ್ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.91 ರಲ್ಲಿ 3 ಎಕರೆ 39 ಗುಂಟೆ ಯನ್ನು ಗುರುತಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಸರ್ವೆ ನಂಬರ್ ಅಲ್ಲ ಪಿಆರ್ ನಂ.91 ಆಗಿದ್ದು ಈಗ ಸರ್ವೆ ನಂ.86 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಹನುಮಸಾಗರದ ಜಮೀನುಗಳನ್ನು ದುರಸ್ತಿ ಆಗಿದೆ ಎಂದರೆ ಇನ್ನೂ ಆಗಿಲ್ಲ Enquiry ಆಗುತ್ತಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನಿಮ್ಮ ಪ್ರಕಾರ ಸರ್ವೆ ನಂ.86 ರಲ್ಲಿ ಬರುತ್ತದಾ ಎಂದರೆ ಸಾಕ್ಷಿಯು ಸರ್ವೆ ದಾಖಲೆಗಳ ಪ್ರಕಾರ ಬರುತ್ತದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.